## ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ

**<u>ಸಿ.ಸಿ ನಂ. 999/2018</u>**

ದಿನಾಂಕಃ. **13.02.2026.** ರಂದು ಸಾಕ್ಷಿಗೆ ಮಧ್ಯಾಹ್ನ **3.30** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು: ಆರೋಪಿ ಪರ ಶ್ರೀ. ವಕೀಲರಿಂದಃ</u>**

ನಾನು ಏನೂ ಓದಿರುವುದಿಲ್ಲ. ನನಗೆ ಸ್ವಂತ ಮನೆ ಇರುವುದಿಲ್ಲ ಎಂದರೆ ಸರಿ. ಆರೋಪಿ ನನಗೆ ಯಾವ ತಿಂಗಳಿನಲ್ಲಿ ಹಣ ಕೇಳಿದಳು ಎಂದು ಈಗ ನೆನಪಿಲ್ಲ. ಆರೋಪಿಗೆ ಹಣ ಕೊಟ್ಟಾಗ ಆರೋಪಿಯ ಮಗ , ಆರೋಪಿ ಮತ್ತು ನಾನು ಮಾತ್ರ ಇದ್ದೆವು. ಆ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ಚೆಕ್ಕನ್ನು ನನಗೆ ಕೊಟ್ಟಳು. ನಾನು ಹಣ ಕೊಟ್ಟಾಗ ನಿ.ಪಿ.1 ಚೆಕ್ಕನ್ನು ಪಡೆದುಕೊಂಡಿದ್ದೆ. ನಾನು ಹಣ ಕೊಡುವ 15 ವರ್ಷದ ಮೊದಲು ಆರೋಪಿಯ ಮಗಳ ಮದುವೆ ಆಗಿತ್ತು ಎಂದರೆ ಚಿಕ್ಕ ಮಗಳ ಮದುವೆ ಆಗಿರಲಿಲ್ಲ. ಸದರಿ ಚಿಕ್ಕಮಗಳ ಮದುವೆ 15 ವರ್ಷದ ಹಿಂದೆ ಆಗಿತ್ತು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಮದುವೆಗೆ 12 ದಿನ ಇದ್ದಾಗ ಹಣ ಕೊಟ್ಟಿದ್ದೇನೆ. 3 ವರ್ಷ ಹಣ ಕೇಳಿದರೂ ಕೊಡಲಿಲ್ಲ. ನಿ.ಪಿ.1 ರಲ್ಲಿ ಬರೆದಿರುವ ಬರವ ಣಿಗೆ ನನಗೆ ಚೆಕ್ ಕೊಟ್ಟಾಗ ಇತ್ತು. ಆರೋಪಿ ಮತ್ತು ಆಕೆ ಯ ಮಗ ನಿ.ಪಿ.1 ಚೆಕ್ಕನ್ನು ಬರೆದುಕೊಟ್ಟಿದ್ದಾರೆ . ನಿ.ಪಿ.1(ಎ) ಸಹಿಯನ್ನು ನನ್ನ ಸಮಕ್ಷಮ ಆರೋಪಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.1(ಎ) ಸಹಿ ಆರೋಪಿಯದು ಅಲ್ಲ ಎಂದರೆ ಸರಿಯಲ್ಲ. ನಿ.ಪಿ.1 ರಲ್ಲಿ ಬರೆದಿರುವ ಬರವಣಿಗೆ ಆರೋಪಿ ಮತ್ತು ಆಕೆಯ ಮಗ ಬರೆದಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿ 6 ನೇ ತರಗತಿವರೆಗೆ ಓದಿದ್ದು ಆಂಗ್ಲಭಾಷ್ಷೆ ಓದಲು ಮತ್ತು ಬರೆವುದಿಲ್ಲ ಎಂದರೆ ನಿ.ಪಿ.1(ಎ) ಸಹಿಯನ್ನು ಆರೋಪಿಯೇ ಮಾಡಿದ್ದಾಳೆ. ಆರೋಪಿಯ ಮಗನ ಹೆಸರು ಮುಖೇಶ್ ಸಾಕ್ಷಿ ಮುಂದುವರೆದು ಅವನು ಹಣ ತೆಗೆದುಕೊಂಡು ಊರು ಬಿಟ್ಟು ಹೋದ. ನನ್ನ ದೂರಿನಲ್ಲಿ ಆರೋಪಿ ಮತ್ತು

ಆಕೆಯ ಮಗ ಬಂದು ಹಣ ಕೇಳಿದರು ಎಂದು ಬರೆಸಿದ್ದೇನೆ. ಆ ರೀತಿ ಬರೆಸಿರುವುದಿಲ್ಲ ಆದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ಚೆಕ್ ಕೊಟ್ಟ ಮೇಲೆ 3 ವರ್ಷ ಕಾಯಿದೆ. ನನ್ನ ಅಳಿಯ ಶ್ರೀನಿವಾಸ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದು ಕರೆದುಕೊಂಡು ಹೋಗುತ್ತಾನೆ ಎಂದರೆ ಸರಿ.

ನನ್ನ ಅಳಿಯ ಆರೋಪಿಯ ವಿರುದ್ದ ಸಲ್ಲಿಸಿದ ಪ್ರಕರಣ ರಾಜಿ ರೂ 50 ಸಾವಿರ ಗಳಿಗೆ ರಾಜಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಳಿಯ ಆರೋಪಿಯಿಂದ 30 ಸಾವಿರ ರೂ ಅನ್ನು ಪಡೆದುಕೊಂಡು ಚೆಕ್ಕನ್ನು ರೂ 1,50,000 ಗಳಿಗೆ ಚೆಕ್ಕನ್ನು ನಗದೀಕರಣಕ್ಕೆ ಸಲ್ಲಿಸಿ ರೂ 55 ಸಾವಿರ ಗಳಿಗೆ ರಾಜಿ ಮಾಡಿಕೊಂಡ ಎಂದರೆ ಅದಕ್ಕೂ ಇದಕ್ಕೂ ಸಂಬಂಧ ಇರುವುದಿಲ್ಲ. ನನ್ನ ಅಳಿಯ ಆರೋಪಿಯ ಬಳಿಯಿಂದ ರೂ 30 ಸಾವಿರ ಪಡೆದಾಗ ಒಂದು ಸಹಿ ಮಾಡಿದ ಚೆಕ್ ಮತ್ತು ಸಹಿ ಇಲ್ಲದ ಒಂದು ಖಾಲಿ ಪಡೆದುಕೊಂಡಿದ್ದ ಎಂದರೆ ನನಗೆ ಗೊತ್ತಿಲ್ಲ. ಆರೋಪಿ 30 ಸಾವಿರ ರೂ ಗೆ ಸಂಬಂಧಿಸಿದ ಪ್ರಕರಣವನ್ನು ರಾಜಿ ಮಾಡಿಕೊಳ್ಳುವ ಮೊದಲು ನನ್ನ ಅಳಿಯ ನನ್ನನ್ನು ಪುಸಲಾಯಿಸಿ ಈ ಪ್ರಕರಣವನ್ನು ದಾಖಲಿಸಿದ್ದಾನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಬಳಿ ಸಾಲ ಕೇಳಿರುವುದಿಲ್ಲ ಮತ್ತು ಸದರಿ ಸಾಲ ಕೊಡಲು ನನಗೆ ಆದಾಯ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸ್ತ್ರೀ ಶಕ್ತಿ ಸಂಘದಿಂದ ಪಡೆದುಕೊಂಡು, ವಯಸ್ಸಾಗಿದೆ ಎಂದು ನನ್ನ ಬಳಿ ರೂ 2 ಲಕ್ಷ ಇಟ್ಟು ಕೊಂಡಿದ್ದೆ. 3 ವರ್ಷ ಕಾಯ್ದ ನಂತರ ನನ್ನ ಅಳಿಯನ ಮಾತು ಕೇಳಿಕೊಂಡು ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ನಿ.ಪಿ.1 ಅನ್ನು ನನ್ನ ಅಳಿಯ ತುಂಬಿದ್ದು ನಾನು ಅದನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ನೋಟಿಸ್ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಗಂಡ 15 ವರ್ಷಗಳ ಹಿಂದೆ ತೀರಿಕೊಂಡಿದ್ದಾನೆ ಎಂದರೆ ಸರಿ. ಆರೋಪಿಗೆ ಆಕೆಯ ಗಂಡ

ತೀರಿಕೊಂಡ ನಂತರ 2014 ರಲ್ಲಿ ಆಕೆಯ ಗಂಡನ ಮೃತ ಪಿಂಚಣಿ ಸೌಲಭ್ಯ ಮತ್ತು ಮರಣೋತ್ತರ ಪರಿಹಾರ  ಬಂದಿದ್ದು ಆಕೆ ಯಾರ ಬಳಿಯೂ ಸಾಲ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.  ಸಾಕ್ಷಿ ಮುಂದುವರೆದು ಆರೋಪಿ ಆಕೆಯ ಗಂಡನ ಮರಣೋತ್ತರ ಸೌಲಭ್ಯ ಇನ್ನೆರಡು ತಿಂಗಳಲ್ಲಿ ಬರುತ್ತದೆ ಎಂದು ಹೇಳಿ ಸಾಲ ಪಡೆದುಕೊಂಡಿದ್ದರು.  ಆರೋಪಿ ಚೆಕ್ಕಿಗೆ ಸಂಬಂಧಿಸಿದಂತೆ ನನ್ನ ಬಳಿ ಯಾವುದೇ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.  ನನ್ನ ಅಳಿಯನೊಂದಿಗೆ ಸೇರಿಕೊಂಡು ಆರೋಪಿಯಿಂದ ಹೆಚ್ಚಿನ ಹಣ ಪಡೆಯಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಮದ್ಯಾಹ್ನ **3.50** ಗಂಟೆಯವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**